ಈ) ಇತ್ತೀಚೆಗೆ ಇಬ್ಬರು ಶಾಲಾ ಮಕ್ಕಳು ಶೌಚಾಲಯದ ಸಮಸ್ಯೆಯಿಂದ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯದ ವ್ಯವಸ್ಥೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 43133 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ. ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಒಟ್ಟು 5491400

ಆ) ಸಾಮಾನ್ಯ ಶೌಚಾಲಯ ಇಲ್ಲದಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳು 13440 ಪ್ರತ್ಯೇಕ ಹೆಣ್ಣು ಮಕ್ಕಳ ಶೌಚಾಲಯ ಇಲ್ಲದಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳು 29326

ಇ) ಬಂದಿದೆ.

ಈ) ಗ್ರಾಮೀಣ ಭಾಗದ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣದ ಜವಾಬ್ದಾರಿಯನ್ನು ಸಂಪೂರ್ಣ ಸ್ವಚ್ಛತಾ ಆಂದೋಲನಾ ಕಾರ್ಯಕ್ರಮದಡಿ ಗ್ರಾಮೀಣ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಪೂರೈಸುತ್ತದೆ. ಸದರಿ ಯೋಜನೆಯಲ್ಲಿ ಎಲ್ಲಾ ಭಾಗದ ಶಾಲಾ ಶೌಚಾಲಯ ನಿರ್ಮಾಣವನ್ನು ಮಾರ್ಚ್–07 ರ ಒಳಗೆ ಪೂರ್ಣಗೊಳಿಸುವ ಗುರಿ ಇದೆ. ನಗರ ಪ್ರದೇಶದ ಶೌಚಾಲಯ ಮತ್ತು ನೀರಿನ ವ್ಯವಸ್ಥೆಗೆ ರೂ. 860.00 ಲಕ್ಷಗಳನ್ನು 2007–08 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿಕೊಂಡಿದೆ.

1644 (2093) ಶ್ರೀ ಶ್ರೀರಾಮರೆಡ್ಡಿ ಜಿ. ವಿ. (ಬಾಗೇಪಲ್ಲಿ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ವರ್ಷದಲ್ಲಿ ಸರ್ಕಾರ ವಿವಿಧ ಯೋಜನೆಗಳಲ್ಲಿ ವಸತಿ ನಿರ್ಮಾಣಕ್ಕಾಗಿ ನಿಗದಿಪಡಿಸಿದ್ದ ಗುರಿ ಎಷ್ಟು (ಭೌತಿಕ ಹಾಗೂ ಆರ್ಥಿಕ ವಿವರ ಒದಗಿಸುವುದು);

ಆ) ಕಳೆದ ತಿಂಗಳ ಅಂತ್ಯದವರೆಗೆ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ;

ಇ) ವಿವಿಧ ಯೋಜನೆಗಳಡಿ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ**

ಪ್ರಸಕ್ತ ವರ್ಷದಲ್ಲಿ ಸರ್ಕಾರವು ಈ ಕೆಳಕಂಡ ಯೋಜನೆಗಳಡಿ ಗುರಿಯನ್ನು ನಿಗದಿಪಡಿಸಿದೆ.

ಸಂಖ್ಯೆ	ಯೋಜನೆಗಳು	ಗುರಿ
1)	ಗ್ರಾಮೀಣ ಆಶ್ರಯ	340560
2)	ಇಂದಿರಾ ಆವಾಸ್	53299

ಕರ್ನಾಟಕ ಗೃಹ ಮಂಡಳಿ

ಪ್ರಸಕ್ತ ವರ್ಷ 2006–07 ರಲ್ಲಿ ಕರ್ನಾಟಕ ಗೃಹ ಮಂಡಳಿಯು 25 ಯೋಜನೆಗಳ ಗುರಿ ನಿಗದಿಪಡಿಸಿದೆ. ನಿವೇಶನಗಳ ಸಂಖ್ಯೆ: 9951 (ಎಲ್.ಐ.ಜಿ, ಎಂ.ಐ.ಜಿ, ಹೆಚ್.ಐ.ಜಿ.) ಮನೆಗಳ ಸಂಖ್ಯೆ 1679 (ಎಲ್.ಐ.ಜಿ. ಎಂ.ಐ.ಜಿ, ಹೆಚ್.ಐ.ಜಿ) ಯೋಜನಾ ವೆಚ್ಚ ರೂ. **22,076.74 ಲಕ್ಷಗಳು.**

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ

2006–07 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಜವಾಹರಲಾಲ್ ರಾಷ್ಟ್ರೀಯ ನಗರ ನವೀಕರಣ ಯೋಜನೆ (JNNURM) ಯಡಿ ಬೆಂಗಳೂರು ನಗರದ 30 ಕೊಳಚೆ ಪ್ರದೇಶಗಳಲ್ಲಿ 189.17 ಕೋಟಿ ರೂ. ವೆಚ್ಚದಲ್ಲಿ 11.600 ಮನೆಗಳನ್ನು ಹಾಗೂ ಮೈಸೂರು ನಗರದ 20 ಕೊಳಚೆ ಪ್ರದೇಶಗಳಲ್ಲಿ 45.62 ಕೋಟಿ ರೂ.ಗಳ ವೆಚ್ಚದಲ್ಲಿ 2788 ಮನೆಗಳನ್ನು ನಿರ್ಮಿಸಲು ಕೇಂದ್ರ ಮಂಜೂರಾತಿ ಸಮಿತಿಯು ಅನುಮೋದನೆ ನೀಡಿದ್ದು, ಶೀಘ್ರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುವುದು. ಇನ್ನು ಉಳಿದ 48 ನಗರ ಮತ್ತು ಪಟ್ಟಣ ಪ್ರದೇಶದ ಕೊಳಚೆ ಪ್ರದೇಶಗಳಲ್ಲಿ ರೂ. 425.00 ಕೋಟಿಗಳ ವೆಚ್ಚದಲ್ಲಿ 32.760 ಮನೆಗಳನ್ನು ಮತ್ತು ಆ ಮನೆಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ರಾಜ್ಯ ಮಟ್ಟದ

ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಯೋಜನಾ ವರದಿಯನ್ನು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಆ) **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ**

ಪ್ರಸಕ್ತ ವರ್ಷದಲ್ಲಿ ಹಿಂದಿನ ಶ್ರೇಣಿಯಡಿಯಲ್ಲಿ ಬಾಕಿ ಇರುವ ಮನೆಗಳನ್ನು ಒಳಗೊಂಡಂತೆ ಒಟ್ಟು 135075 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, ಒಟ್ಟು 41904.96 ಲಕ್ಷಗಳಲ್ಲಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

ಕರ್ನಾಟಕ ಗೃಹ ಮಂಡಳಿ

ಕಳೆದ ತಿಂಗಳ ಅಂತ್ಯದವರೆಗೆ 134 ಮನೆಗಳನ್ನು ನಿರ್ಮಿಸಲಾಗಿದೆ.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ

ವಾಂಬೆ ಯೋಜನೆಯಡಿ ನಿರ್ಮಾಣದ ಹಂತದಲ್ಲಿರುವ 8,485 ಮನೆಗಳ ಪೈಕಿ ಫೆಬ್ರುವರಿ 2007 ರ ಅಂತ್ಯದವರೆಗೆ 1,685 ಮನೆಗಳು ಪೂರ್ಣಗೊಂಡಿದ್ದು, ಉಳಿದ ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

ಇ) **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ**

ಯೋಜನೆ	**ದಿ: 28–02–07 ರವರೆಗೆ ಪೂರ್ಣಗೊಳಿಸಲಾದ ಮನೆಗಳು**	**ಪ್ರಸಕ್ತ ಸಾಲಿನಲ್ಲಿ ಬಿಡುಗಡೆಗೊಳಿಸಲಾದ ಅನುದಾನದ ವಿವರಗಳು (ಲಕ್ಷಗಳಲ್ಲಿ)**
ನಗರ ಆಶ್ರಯ	5187	789.43
ಗ್ರಾಮೀಣ ಆಶ್ರಯ	85486	29077.42
ಗ್ರಾಮೀಣ ಅಂಬೇಡ್ಕರ್	4813	2219.91
ಐ.ಎ.ವೈ ಯೋಜನೆ	39589	9818.20
ಒಟ್ಟು	**135075**	**41904.96**

ಕರ್ನಾಟಕ ಗೃಹ ಮಂಡಳಿ

ವಿವಿಧ ಯೋಜನೆಗಳ ಭೌತಿಕ ಹಾಗೂ ಆರ್ಥಿಕ ವಿವರಗಳನ್ನು ಅನುಬಂಧ –1 ರಲ್ಲಿ ವಿವರಿಸಲಾಗಿದೆ.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ

ಈ ಕೆಳಕಂಡ ವಿವಿಧ ಯೋಜನೆಗಳಡಿ ನಿರ್ಮಿಸಿರುವ ಮನೆಗಳ ಭೌತಿಕ/ಆರ್ಥಿಕ ಪ್ರಗತಿ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಭೌತಿಕ ಪ್ರಗತಿ	ಆರ್ಥಿಕ ವೆಚ್ಚ
1.	ವಾಂಬೆ	1685	750.00

ಅನುಬಂಧ – 1

ಕರ್ನಾಟಕ ಗೃಹ ಮಂಡಳಿ

100 ವಸತಿ ಯೋಜನೆಯಡಿಯಲ್ಲಿ 2006–07 ರಲ್ಲಿ ಕೈಗೊಂಡ ಯೋಜನೆಗಳು

ಕ್ರ. ಸಂ	ಯೋಜನೆಯ ಹೆಸರು	ಜಿಲ್ಲೆ	ಒಟ್ಟು ನಿವೇಶನ	ಪ್ರತಿ ಜಿಲ್ಲೆಯಲ್ಲಿ ಕಟ್ಟಲು ಉದ್ದೇಶಿಸಿರುವ ಮನೆಗಳು	ಯೋಜನಾ ವೆಚ್ಚ ರೂ. ಲಕ್ಷಗಳಲ್ಲಿ	ಪ್ರಗತಿ	ಹಣಪಾವತಿ ಸಿರುವುದು ರೂ. ಲಕ್ಷ	ಷರಾ
1.	ಬನ್ನೂರು	ಮೈಸೂರು	90	0	48.00	100%	27.62	ಯೋಜನೆ ಕೆಲಸ ಮುಗಿದಿದೆ.
2.	ರಾಮಸಮುದ್ರ	ಚಾಮರಾಜನಗರ	166	50	433.00	100%	315.86	ಯೋಜನೆ ಕೆಲಸ ಮುಗಿದಿದೆ.
3.	ರಾಜಾಮರ, ಪಿರಿಯಾ ಪಟ್ಟಣ	ಮೈಸೂರು	825	0	607.00	–	124.70	ನಿರ್ಮಾಣದ ಕೆಲಸ ನಡೆಯುತ್ತಿದೆ
4.	ಚನ್ನಪಟ್ಟಣ ಹಾಸನ	ಹಾಸನ	2167	300	8300.00	30%	2113.00	ನಿರ್ಮಾಣದ ಕೆಲಸ ನಡೆಯುತ್ತಿದೆ
5.	ಕಲ್ಲಹಳ್ಳಿ, ಶಿವಮೊಗ್ಗ	ಶಿವಮೊಗ್ಗ	84	0	50.00	90%	39.45	ನಿರ್ಮಾಣದ ಕೆಲಸ ನಡೆಯುತ್ತಿದೆ
6.	ಕೆಳಕೋಟೆ ಮದಕರಿಪುರ, ಚಿತ್ರದುರ್ಗ	ಚಿತ್ರದುರ್ಗ	135	0	271.50	20%	–	ನಿರ್ಮಾಣದ ಕೆಲಸ ನಡೆಯುತ್ತಿದೆ
7.	ಕಂಪ್ಲಿ	ಬಳ್ಳಾರಿ	273	70	739.45	60%	247.58	ನಿರ್ಮಾಣದ ಕೆಲಸ ನಡೆಯುತ್ತಿದೆ

8.	ಲಿಂಗಸೂಗೂರು	ರಾಯಚೂರು	85	46	200.00	50%	27.53	ನಿರ್ಮಾಣದ ಕೆಲಸ ನಡೆಯುತ್ತಿದೆ
9.	ಕುವೆಂಪುನಗರ	ಬಳ್ಳಾರಿ	–	20	115.00	90%	88.67	ನಿರ್ಮಾಣದ ಕೆಲಸ ನಡೆಯುತ್ತಿದೆ
10.	ಬಸವಕಲ್ಯಾಣ	ಬೀದರ್	277	32	360.59	90%	299.05	ನಿರ್ಮಾಣದ ಕೆಲಸ ನಡೆಯುತ್ತಿದೆ
11.	ಯಾದಗಿರಿ	ಗುಲ್ಬರ್ಗಾ	136	15	317.80	85%	247.89	ನಿರ್ಮಾಣದ ಕೆಲಸ ನಡೆಯುತ್ತಿದೆ
12.	ಗುಲ್ಬರ್ಗಾ ಎರ್‌ಪೋರ್ಟ್‌ಲ್ಯಾಂಡ್	ಗುಲ್ಬರ್ಗಾ	2591	750	5700.00	10.43%	436.98	ನಿರ್ಮಾಣದ ಕೆಲಸ ನಡೆಯುತ್ತಿದೆ
13.	ಲಂಡಕನಹಳ್ಳಿ ಶಿರಸಿ	ಉತ್ತರ ಕನ್ನಡ	205	10	170.00	96.36%	147.24	ನಿರ್ಮಾಣದ ಕೆಲಸ ನಡೆಯುತ್ತಿದೆ
14.	ಲಕ್ಕಮ್ಮನಹಳ್ಳಿ	ಧಾರವಾಡ	371	50	1000.00	69.15%	360.62	ನಿರ್ಮಾಣದ ಕೆಲಸ ನಡೆಯುತ್ತಿದೆ
15.	ಬಂಕಾಪುರ	ಧಾರವಾಡ	114	2	60.00	100%	47.29	ಯೋಜನಾ ಕೆಲಸ ಮುಗಿದಿದೆ.
16.	ಇಟ್ಟಂಗಿಹಾಳ್ ಬಿಜಾಪುರ್	ಬಿಜಾಪುರ	780	75	1200.23	96.72%	978.09	ನಿರ್ಮಾಣದ ಕೆಲಸ ನಡೆಯುತ್ತಿದೆ
17.	ಬಸವನ ಬಾಗೇವಾಡಿ	ಬಿಜಾಪುರ	144	50	171.50	–	–	ಕೆಲಸ ಪ್ರಾರಂಭಿಸಬೇಕಾಗಿದೆ.
18.	ಸಿಂದಗಿ	ಬಿಜಾಪುರ	307	12	240.00	–	–	ಕೆಲಸ ಪ್ರಾರಂಭಿಸಬೇಕಾಗಿದೆ

19. ಕಣ್ಣರ್ಗಿ	ಬೆಳಗಾಂ	21	–	65.00	46%	30.09	ನಿರ್ಮಾಣದ ಕೆಲಸ ನಡೆಯುತ್ತಿದೆ
20. ಚಿಕ್ಕೋಡಿ	ಬೆಳಗಾಂ	150	5	120.00	15.09%	2.29	ನಿರ್ಮಾಣದ ಕೆಲಸ ನಡೆಯುತ್ತಿದೆ
21. ಗೋಕಾಕ್	ಬೆಳಗಾಂ	163	40	390.00	61.05%	263.77	ನಿರ್ಮಾಣದ ಕೆಲಸ ನಡೆಯುತ್ತಿದೆ
22. ಹಿಂಡಲಗಾ	ಬೆಳಗಾಂ	104	30	459.98	50.95%	169.99	ನಿರ್ಮಾಣದ ಕೆಲಸ ನಡೆಯುತ್ತಿದೆ
23. ಸೌಂದತ್ತಿ	ಬೆಳಗಾಂ	137	10	333.69	16.41%	54.05	ನಿರ್ಮಾಣದ ಕೆಲಸ ನಡೆಯುತ್ತಿದೆ
24. ಹುಲಕೋಟಿ	ಗದಗ್	220	82	474.00	100%	401.43	ನಿರ್ಮಾಣದ ಕೆಲಸ ನಡೆಯುತ್ತಿದೆ
25. ಚನ್ನಪಟ್ಟಣ	ಬೆಂಗಳೂರು	406	30	250.00	60%	236.25	ನಿರ್ಮಾಣದ ಕೆಲಸ ನಡೆಯುತ್ತಿದೆ
	ಒಟ್ಟು	9951	1679	22076.74			